KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Exam Confidential Section
ಪರೀಕ್ಷಾ ಗೌಪ್ಯ ವಿಭಾಗ
"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Fax No. 0837-2741928
Tel Ph No. 0836-2215259
Website : www.kud.ac.in

ನಂ:/ಕವಿವಿ/ಪರೀಕ್ಷಾ/ಗೌಪ್ಯ/2024/170 ದಿನಾಂಕ: 18/06/2024.

# ತಿದ್ದುಪಡಿ ಅಧಿಸೂಚನೆ

ವಿಷಯ: ಜುಲೈ/ಆಗಸ್ಟ್ 2024 ರಲ್ಲಿ ಜರಗುವ ರಾಷ್ಟ್ರೀಯ ಶಿಕ್ಷಣ ನೀತಿ 2020 (ಎನ್.ಇ.ಪಿ) ಅಡಿಯಲ್ಲಿ ಬರುವ ಎಲ್ಲ ಸ್ನಾತಕ ಪದವಿಗಳ 2, 4 ಮತ್ತು 6 ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ/ಶುಲ್ಕ ತುಂಬುವ ಅವಧಿ ವಿಸ್ತರಿಸುವ ಕುರಿತು

ಉಲ್ಲೇಖ: ಅಧಿಸೂಚನೆ ನಂ.ಕವಿವಿ/ಪರೀಕ್ಷಾ/ಗೌಪ್ಯ/2024/141, ದಿನಾಂಕ:04/06/2024

ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಉಲ್ಲೇಖಿತ ಅಧಿಸೂಚನೆಯ ಪ್ರಕಾರ ರಾಷ್ಟ್ರೀಯ ಶಿಕ್ಷಣ ನೀತಿ 2020 (NEP) ಅಡಿಯಲ್ಲಿ ಬರುವ ಎಲ್ಲ ಸ್ನಾತಕ ಪದವಿಗಳ 2, 4 ಮತ್ತು 6 ನೇ ಸೆಮಿಸ್ಟರ್ (ರೆಗ್ಯುಲರ್/ರಿಪೀಟರ್ಸ್) ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ/ಶುಲ್ಕ ತುಂಬಲು ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

ಮುಂದುವರೆದು, ಯು.ಯು.ಸಿ.ಎಂ.ಎಸ್ ತಂತ್ರಾಂಶದ ತಾಂತ್ರಿಕ ಕಾರಣಗಳಿಂದಾಗಿ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪರೀಕ್ಷಾ ಅರ್ಜಿ/ಶುಲ್ಕ ತುಂಬುವ ಅವಧಿಯನ್ನು ಈ ಕೆಳಗಿನಂತೆ ವಿಸ್ತರಿಸಲಾಗಿದೆ. ಕಾರಣ, ತಿದ್ದುಪಡಿ ಅಧಿಸೂಚನೆಯನ್ನು ಸಂಬಂಧಪಟ್ಟ ಎಲ್ಲ ಸಿಬ್ಬಂದಿಗಳಿಗೆ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತಂದು ಅದರಂತೆ ಕ್ರಮ ಜರುಗಿಸಲು ಸೂಚಿಸಲಾಗಿದೆ.

1. **ದಿನಾಂಕ:04/06/2024** ರಿಂದ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯನ್ನು **UUCMS** ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕವನ್ನು ಭರಿಸಿ ದಂಡವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:22/06/2024**. SBI Collect Online ಮುಖಾಂತರ ಭರಿಸುವ ಶುಲ್ಕವನ್ನು **ದಿನಾಂಕ:24/06/2024** ರ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಭರಿಸುವುದು.
2. ವಿದ್ಯಾರ್ಥಿಗಳು **ರೂ.180/-** ಮೊದಲನೆಯ ದಂಡದೊಂದಿಗೆ ಪರೀಕ್ಷಾ ಅರ್ಜಿಯನ್ನು **UUCMS** ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕವನ್ನು ಭರಿಸಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:25/06/2024**. SBI Collect Online ಮುಖಾಂತರ ಭರಿಸುವ ಶುಲ್ಕವನ್ನು **ದಿನಾಂಕ:26/06/2024** ರ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಭರಿಸುವುದು.
3. ವಿದ್ಯಾರ್ಥಿಗಳು **ರೂ.200/-** ಎರಡನೆಯ ದಂಡದೊಂದಿಗೆ ಪರೀಕ್ಷಾ ಅರ್ಜಿಯನ್ನು **UUCMS** ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕವನ್ನು ಭರಿಸಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:27/06/2024**. SBI Collect Online ಮುಖಾಂತರ ಭರಿಸುವ ಶುಲ್ಕವನ್ನು **ದಿನಾಂಕ:28/06/2024** ರ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಭರಿಸುವುದು.
4. ಪ್ರಾಚಾರ್ಯರು ಎಲ್ಲ ವಿದ್ಯಾರ್ಥಿಗಳ **UUCMS** ತಂತ್ರಾಂಶದ ಮೂಲಕ ಸಲ್ಲಿಸಿದ ಪರೀಕ್ಷಾ ಅರ್ಜಿ ಹಾಗೂ ಶುಲ್ಕದ ವಿವರಗಳನ್ನು ಪರಿಶೀಲಿಸಿ ಯಾದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಕೊನೆಯ **ದಿನಾಂಕ:29/06/2024**.

18/6

ಕುಲಸಚಿವರು(ಮೌಲ್ಯಮಾಪನ)

ಗೆ,
ಕ.ವಿ.ವಿ. ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

**ಪ್ರತಿಗಳು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:**

1) ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ,/ಎಸ್‌ಸಿ/ಎಸ್‌ಟಿ/ಕೆ-1/ಓಬಿಸಿ ಘಟಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. **(ಅಧಿಸೂಚನೆಯನ್ನು ಅಂತರ್ಜಾಲದಲ್ಲಿ ಪ್ರಕಟಿಸುವುದು.)**
4) ಆಪ್ತಕಾರ್ಯದರ್ಶಿಗಳು, ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ)/ವಿತ್ತಾಧಿಕಾರಿಗಳು, ಕವಿವಿ, ಧಾರವಾಡ.
5) ಸಿಸ್ಟಮ್ ಎನಾಲಿಸ್ಟ್, ಪರೀಕ್ಷಾ ಗಣಕಯಂತ್ರ ವಿಭಾಗ, ಕ.ವಿ.ವಿ. ಧಾರವಾಡ.
6) ಉಪಕುಲಸಚಿವರು/ ಸಹಾಯಕ ಕುಲಸಚಿವರು, ಪರೀಕ್ಷಾ/ ಹಣಕಾಸು/ ವಿದ್ಯಾಮಂಡಳ ವಿಭಾಗ, ಕ ವಿ ವಿ, ಧಾರವಾಡ.
7) ಅಧೀಕ್ಷಕರು, ಹಣಕಾಸು/ ವಿದ್ಯಾಮಂಡಳ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
8) ಅಧೀಕ್ಷಕರು, ಗೌಪ್ಯ/ಪ್ರಶ್ನೆಪತ್ರಿಕೆ/ಬಿ.ಎ./ಬಿ.ಕಾಂ./ಬಿ.ಎಸ್.ಸಿ./ಕಾನೂನು/ಘಟಿಕೋತ್ಸವ ಪರೀಕ್ಷಾ ವಿಭಾಗ, ಕವಿವಿ,ಧಾರವಾಡ.